**ಕಣ್ಣೆವೆಗೆ ತಾಗಿದ ಗುರಿ ಮುಗ್ಗರಿಸಿ ಬಿಟ್ಟಿತು, ನೋಟ ನೆಟ್ಟಷ್ಟು ಬಟಾಬಯಲು ಮರು ಹುಟ್ಟುಹಾಕಿತು, ಕುಲ ಹೊಲ ಸಕಲ ಕೆಟ್ಟಷ್ಟು ಹೊಸ ಸೃಷ್ಟಿಯಾಯಿತು'**

ಎಂಬ ಮಾಂತ್ರಿಕ ಸಾಲುಗಳು ಇಲ್ಲಿವೆ. ಇನ್ನೊಂದೆಡೆ ಕವಿ, 'ನಮ್ಮ ಹಿರಿಜೀವಗಳ, ಕರಿ ಹೆಜ್ಜೆಗಳು, ದಿಕ್ಕೆಟ್ಟ ಹಗಲುಗಳಿಗೆ, ದಾರಿ ಚುಕ್ಕಿಗಳು' ಎಂದು ಆಗಿ ಹೋದ ಚೈತನ್ಯಗಳನ್ನು ನೆನಪಿಸಿಕೊಳ್ಳುತ್ತಾರೆ.


ಆಹಾರದ ಹೆಸರಿನಲ್ಲಿ ಸಮುದಾಯಗಳನ್ನು ಒಡೆಯುತ್ತಿರುವ, ಕೀಳಾಗಿ ಕಾಣುತ್ತಿರುವ ಮತ್ತು ಆಹಾರದ ಹಕ್ಕನ್ನು ಕಸಿದು ಕೊಳ್ಳುತ್ತಿರುವ ಈ ಹೊತ್ತಲ್ಲಿ ಎನ್.ಕೆ. ಹನುಮಂತಯ್ಯ, ಕೆ.ವಿ. ನೇತ್ರಾವತಿ, ವಿಕಾಸ್ ಆರ್. ಮೌರ್ಯ ಅವರ ಕವಿತೆಗಳು ತೋರುತ್ತಿರುವ ಸಾಂಸ್ಕೃತಿಕ ಪ್ರತಿರೋಧ ಮಹತ್ವದ್ದು. ಎನ್.ಕೆ. ಹನುಮಂತಯ್ಯ ಅವರ 'ಗೋವು ತಿಂದು ಗೋವಿನಂತಾದವನು', ನೇತ್ರಾವತಿಯವರ 'ತಾತ, ಬಡ್ಡುಬಾಡು ಮತ್ತು ಹಲಗೆ', ಮತ್ತು ವಿಕಾಸ್ ಅವರ 'ಕನ್ನಡ ಎಂದರೆ ಕೊರಬಾಡು ಇದ್ದಂಗೆ' ಎಂಬ ಕವಿತೆಗಳು ಶಕ್ತ ರೂಪಕಗಳಾಗಿ, ಗಟ್ಟಿದನಿಗಳಾಗಿ ಹೊಮ್ಮಿವೆ. ಇದೇ ದನಿಯಲ್ಲಿ ಎಸ್. ಮಂಜುನಾಥ್ ಅವರ 'ಊಟಕ್ಕೆ ಬನ್ನಿರಿ ನಮ್ಮನೆಗೆ' ಎಂಬ ಕವಿತೆ ಮಾತನಾಡುತ್ತದೆ. ಜೊತೆಗೆ ಇದು ಹಿಂಸೆ- ಅಹಿಂಸೆಗಳ ಕುರಿತು ನಾವು ಕಟ್ಟಿಕೊಂಡ ಸರಳವಾದ ಮತ್ತು ತಪ್ಪು ತಪ್ಪಾದ ಗ್ರಹಿಕೆಯನ್ನು ಒಡೆಯುತ್ತದೆ, ನಮ್ಮ ಮನೆಗೆ ಊಟಕ್ಕೆ ಬನ್ನಿ ಎಂದು ಕರೆಯುತ್ತಾ ನಾವು

**'ಮೊಳಕೆ ಕಾಳುಗಳ ಚಿವುಟಿ, ಮಸಾಲೆ ಅರೆಯುವುದಿಲ್ಲ, ಕಾದ ಎಣ್ಣೆಗೆ ಸಾಸುವೆ ಕಾಳುಗಳ, ಸುರಿದು ನರಕ ದರ್ಶನ ಮಾಡಿಸುವುದಿಲ್ಲ'**

ಎಂದು ಕವಿ ಹೇಳುತ್ತಾರೆ. ಮುಂದುವರೆದು

**'ನನ್ನ ಮನೆಯಲ್ಲಿ, ಬಲು ಮಾಗಿದ ಪಶುವೊಂದು, ಭೂಮಿಯ ತೊಟ್ಟು ಕಳಚಿಕೊಂಡಿದೆ; ಕೆಂಡದಂತಹ ಸುಡುಬಿಸಿಲಿಗೆ, ಮೈಯೊಡ್ಡಿ ಮೃದು ಹೂವಿನ, ಎಸಳಿನಂತಾಗಿದೆ, ಹಂಚಿ ತಿನ್ನೋಣ ಬನ್ನಿರಿ'**

-ಎಂದು ಕರೆಯುತ್ತಾರೆ. ಒಡೆಯುವ ಆಹಾರ ರಾಜಕಾರಣದ ಎದುರಿಗೆ ಹಂಚಿ, ತಿನ್ನುವ ಮಾತನ್ನು ಈ ಕವಿತೆ ಆಡುತ್ತದೆ. ಎಸ್. ಮಂಜುನಾಥ್ ಅವರ ಕವಿತೆಗಳು ಆಶಯದ ನೆಲೆಯಲ್ಲಿ ಅವರ ಸಮಕಾಲೀನ ಇತರ ಕವಿಗಳ ಸಂವೇದನೆಗೆ ಹತ್ತಿರವಾಗಿವೆ. ಆದರೆ ಭಾಷೆ, ಲಯದ ಮೇಲಿನ ಹಿಡಿತದಿಂದಾಗಿ ಈ ಕವಿತೆಗಳು ವಿಶಿಷ್ಟವಾಗಿವೆ. 'ನಂಬಿದ ದ್ಯಾವರೇ ಕೊಂಬೆಯ ಕಡಿದಂತೆ, ತುಂಬಿದ ಹೊಳೆಯೊಳು ದಾವುರ ಉಕ್ಕಿದಂತೆ', 'ಮೆಟ್ಟು ಹೊಲೆದು ಕೊಟ್ಟೇವು, ಬೆಟ್ಟು ಮುರಿದು ಕೊಟ್ಟೇವು, ನಮ್ಮೆದೆಗೆ ನೆಟ್ಟ ಬಾಣಗಳಿಂದ ಹೂ ಬಿಡಿಸಿ ಕೊಟ್ಟೇವು' ಮೊದಲಾದ ಸಾಲುಗಳಲ್ಲಿ ಮೂಡಿಬರುವ ಶಬ್ದಗಳ ಮಾಲೆ, ಅವು ಸೃಷ್ಟಿಸುವ ಭಾವಲೋಕ ಅನನ್ಯವಾದವು. ಇನ್ನೊಂದೆಡೆ ಇವರು 'ಅಗ್ನಿಸಾರಿಕೆ' ಎಂಬ ಪದ ಟಂಕಿಸುತ್ತಾರೆ. ಈ ಪದವೇ ಬೇರೆ ಬೇರೆ ನೆಲೆಯಲ್ಲಿ ಚಿಂತನೆಗೆ ಹಚ್ಚುತ್ತದೆ. ಇಲ್ಲಿನ ಕವಿತೆಗಳಲ್ಲಿ ಬರುವ ಇರುವೆ, ಗುಬ್ಬಿ, ಚಿಟ್ಟೆಗಳಿಗೆ ಪ್ರಭುತ್ವ ಬೆದರುವ ಬಗೆ ಪ್ರಭುತ್ವದ ಟೊಳ್ಳುತನವನ್ನೂ ಸಾಮಾನ್ಯರಿಗಿರುವ ಶಕ್ತಿಯನ್ನೂ ತೋರುತ್ತದೆ. ಎರಡು ಸಂಕಲನಗಳ ಬಳಿಕ ಮೂರನೇ ಸಂಕಲನವನ್ನು ಕನ್ನಡದ ಓದುಗರ ಮುಂದಿಟ್ಟಿರುವ ಎಸ್. ಮಂಜುನಾಥ್ ಅವರು ಶಕ್ತ ಕವಿಯಾಗಿ ಹೊಮ್ಮಿದ್ದಾರೆ. ಒಟ್ಟು ಕನ್ನಡ ಕಾವ್ಯದ ಹರಹಿನಲ್ಲಿ ಇವರ ಕವಿತೆಗಳು ಇನ್ನೂ ಹೆಚ್ಚು ಚರ್ಚೆಗೆ ಒಳಪಡಬೇಕಿತ್ತು.



ಒಂದೆಡೆ ಕವಿ ಈ ಕಾಲ, 'ನಿಜದ ನಡಿಗೆಯೊಳು ಸುಳ್ಳಿನ ಹೆಜ್ಜೆಯೊಂದು ಅವಿತುಕೊಂಡಿರುವ ಹೊತ್ತು' ಎನ್ನುತ್ತಾರೆ. ಇಂದು 'ಮಾಯಾಂತಕರು ಮೈಮುರಿದು, ಸಟೆದು ನಿಲ್ಲುತ್ತಿದ್ದಾರೆ, ಮಂಡೆಯೊಲೆಯಲ್ಲಿ ಬೆಂದ, ಮೌನಾಕ್ಷರಗಳ ಗಬಗಬನೆ ಮುಕ್ಕುತ್ತಿದ್ದಾರೆ,; ಇದು ಕಬಳಿಕೆಯ ಕಾಲ, ಆಮಿಷವಿಕ್ಕದೆ ನಿಮಿಷಗಳ ಕದಿಯುವ ಅಕಾಲ' ಎಂದೂ ಕವಿ ಹೇಳುತ್ತಾರೆ. ಈ ಹೊತ್ತಲ್ಲಿ ಕವಿಯ ಕೆಲಸ ನಿಜದ ಮೇಲೆ ಆವರಿಸಿಕೊಂಡಿರುವ ಸುಳ್ಳಿನ ಪರೆಯನ್ನು ಹರಿಯುವುದು. ಈ ದಾರಿಯಲ್ಲಿ ಪಯಣಿಗರ ಜೊತೆ ಸಂವಾದಕ್ಕೆಳಸುತ್ತಾ ಸಾಗುವ ಎಸ್. ಮಂಜುನಾಥ್ ಅವರ ಕವಿತೆಗಳು ನಮ್ಮ ಒಡನಾಡಿಗಳಾಗಿ ಎಚ್ಚರಿಸುವಂಥವು.

●